**ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.**

**ಉಪಸ್ಥಿತರುಃ- ಶ್ರೀ ರಾಹುಲ ಚಾಂಭಾರ ಬಿ.ಎ.ಎಲ್.ಎಲ್.ಬಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,**

**ಸಿ.ಸಿ. ನಂಃ 1015/2019**

**ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಯಾದಗಿರಿ (ಗ್ರಾ) ಪೊಲೀಸ್ ಠಾಣೆ**

**// ವಿರುದ್ದ //**

**ಆರೋಪಿ ಃ ಹಣಮಂತ**

**ದೋಷಾರೋಪಣೆ**

| | |
|---|---|
| 1. | ಹಣಮಂತ ತಂದೆ ಸಾಬಣ್ಣ ಮಾದರ, ವಃ 50 ವರ್ಷ, ಉಃ ಒಕ್ಕಲುತನ , ಸಾಃ ನಾಗರಬಂಡ |

1. ಮೊದಲನೆಯದಾಗಿ ಯಾದಗಿರಿ (ಗ್ರಾ) ಪೋಲಿಸ ಠಾಣೆಯ ವ್ಯಾಪ್ತಿಯಲ್ಲಿ ಬರುವ ಮಲಾರ ಗ್ರಾಮದ ಸೀಮಾಂತದಲ್ಲಿ ಚಾಸಾಃ 1 ರವರ ಹೊಲದ ಹತ್ತಿರ ದಿನಾಂಕಃ 12.10.2019 ರಂದು ಬೆಳಿಗ್ಗೆ 10ಃ00 ಗಂಟೆ ಸುಮಾರಿಗೆ ಆರೋಪಿಯಾದ ನೀನು ಚಾಸಾಃ 1, 4, 5 ರವರಿಗೆ ಏ ರಂಡಿ ಮಕ್ಕಳೇ ಈ ಹೊಲಕ್ಕೆ ಯಾಕೆ ಬಂದಿರಿ ಈ ಹೊಲ ಸರಕಾರ ನನಗೆ ಮಂಜೂರು ಮಾಡಿದೆ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಈ ಮೂಲಕ ಭಾ. ದಂ. ಸ. ಕಲಂ 504 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

2. ಎರಡನೆಯದಾಗಿ ಈ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿಯಾದ ನೀನು ಚಾಸಾಃ 1 ರವರಿಗೆ ಕೈಯಿಂದ ಹೊಡೆದು ಗುಪ್ತಗಾಯ ಮಾಡಿದ್ದು, ಈ ಮೂಲಕ ಭಾ. ದಂ. ಸ. ಕಲಂ 323 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

3. ಮೂರನೆಯದಾಗಿ ಈ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿಯಾದ ನೀನು ಚಾಸಾಃ 1 ರವರಿಗೆ ನೀನು ನಿನ್ನ ಗಂಡನ ಮನೆಗೆ ಹೋಗದೆ ನಮ್ಮ ಮನೆಯಲ್ಲಿ ಜಗಳ ಹಚ್ಚುತ್ತಿದ್ದಿ ನಿನಗೆ ಬಹಳ ಸೊಕ್ಕು ಇದೆ ಇವತ್ತು ನಿನಗೆ ಬಿಡುವುದಿಲ್ಲ ಅಂತಾ ಮುಂದೆ ಹೋಗದಂತೆ ತಡೆದು ಅಡ್ಡಗಟ್ಟಿ ನಿಲ್ಲಿಸಿದ್ದು, ಈ ಮೂಲಕ ಭಾ.

ದಂ. ಸ. ಕಲಂ 341 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

4. ನಾಲ್ಕನೆಯದಾಗಿ ಈ ಮೇಲೆ ಹೇಳಿದ ದಿನ, ದಿನಾಂಕ, ಸ್ಥಳ, ಸಮಯ ಹಾಗೂ ಸಂದರ್ಭದಂದು ಆರೋಪಿಯಾದ ನೀನು ಚಾಸಾಃ 1 ರವರಿಗೆ ಸೀರೆ ಹಿಡಿದು ಎಳೆದಾಡಿ, ಮಾನಭಂಗ ಮಾಡಲು ಪ್ರಯತ್ನ ಮಾಡಿದ್ದು ಈ ಮೂಲಕ ಭಾ. ದಂ. ಸ. ಕಲಂ 354 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

5. ಕೊನೆಯದಾಗಿ ಈ ಮೇಲೆ ಹೇಳಿದ ದಿನ, ದಿನಾಂಕ, ಸ್ಥಳ, ಸಮಯ ಹಾಗೂ ಸಂದರ್ಭದಂದು ಆರೋಪಿಯಾದ ನೀನು ಚಾಸಾಃ 1, 4 ಮತ್ತು 5 ರವರಿಗೆ ಈ ಹೊಲಕ್ಕೆ ಯಾಕೆ ಬಂದಿರಿ ಈ ಹೊಲ ಸರಕಾರ ನನಗೆ ಮಂಜೂರು ಮಾಡಿದೆ. ಈ ಹೊಲದಲ್ಲಿ ಕಾಲು ಇಟ್ಟರೆ ನಿಮಗೆ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವದ ಬೆದರಿಕೆ ಹಾಕಿದ್ದು, ಈ ಮೂಲಕ ಭಾ. ದಂ. ಸ. ಕಲಂ 506 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

(ಈ ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ ತಿಳಿಸಿ ಅವರು ನೀಡಿದ ವಿವರಣೆಯನ್ನು ಯತಾಪ್ರಕಾರವಾಗಿ ದಾಖಲಿಸಿಕೊಂಡಿದ್ದೇನೆ).

ದಿನಾಂಕಃ 21-11-2023
ಸ್ಥಳ : ಯಾದಗಿರಿ

**(ಶ್ರೀ ರಾಹುಲ ಚಾಂಭಾರ )**
**ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ ಎಫ್ ಸಿ**
**ನ್ಯಾಯಾಧೀಶರು ಯಾದಗಿರಿ**